**OS No:206/2022**
**DW:1**

(ಇಂದು ದಿನಾಂಕಃ **15-07-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ ಎಚ್ ಎಸ್ ಕೆ ವಕೀಲರಿಂದಃ**

ನಾನು ಡಿಪ್ಲೋಮಾ ವ್ಯಾಸಾಂಗ ಮಾಡಿರುತ್ತೇನೆ. 2 ನೇ ಪ್ರತಿವಾದಿಯ ಕುಟುಂಬದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನಾನು ಖರೀದಿಸಿದ ಆಸ್ತಿಗಳ ಖರೀದಿ ವ್ಯವಹಾರವನ್ನು 2 ನೇ ಪ್ರತಿವಾದಿಯ ಮನೆಯಲ್ಲಿ ಮಾಡಿರುತ್ತೇನೆ. ಸದರಿ ಖರೀದಿಯ ವೇಳೆ ವಾದಿಯ ಒಪ್ಪಿಗೆ ಪಡೆದಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಾನು ಖರೀದಿ ಮಾಡುವ ವೇಳೆ ದಾವಾ ಆಸ್ತಿ ಕ್ರಮ ಸಂಃ ಡಿ ಮತ್ತು ಇ ಗಳು 2 ನೇ ಪ್ರತಿವಾದಿಯ ಹೆಸರಿನಲ್ಲಿದ್ದ ಕಾರಣ ಆತನಿಂದ ಖರೀದಿಸಿರುತ್ತೇನೆ ಎಂದು ನುಡಿದಿರುತ್ತಾರೆ. 2 ನೇ ಪ್ರತಿವಾದಿ ಏನು ಉದ್ಯೋಗ ಮಾಡುತ್ತಾರೋ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ತನ್ನ ಯಾವ ಆದಾಯದಿಂದ ಸದರಿ ಆಸ್ತಿಗಳನ್ನು ಖರೀದಿಸಿರುತ್ತಾರೆ ಎಂದು ನಾನು ವಿಚಾರಿಸಿರುವುದಿಲ್ಲ. ವಾದಿ ಮತ್ತು 2 ನೇ ಪ್ರತಿವಾದಿಯ ತಂದೆ ಅಂದರೆ 1 ನೇ ಪ್ರತಿವಾದಿ ಈಗ ಜೀವಂತವಿದ್ದಾರೆ. 1 ನೇ ಪ್ರತಿವಾದಿ ದಾವಾ ಆಸ್ತಿ ಕ್ರಮ ಸಂಃ ಎ ಯಿಂದ ಸಿ ವರೆಗಿನ ಜಮೀನುಗಳಿಂದ ಬಂದ ಆದಾಯದಲ್ಲಿ ಆಸ್ತಿ ಸಂಃ ಡಿ ಮತ್ತು ಇ ಗಳನ್ನು ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿ ಸಂಃ ಎ ಯಿಂದ ಸಿ ಗಳಲ್ಲಿ ನೀರಾವರಿ ಸೌಲಭ್ಯ, ಪೇರಲ ತೋಟ ಇರುತ್ತವೆ ಎಂದರೆ ನಾನು ನೋಡಿಲ್ಲ. ನಿಡಿ-2 ಮತ್ತು 3 ಗಳಿಗೆ 2 ನೇ ಪ್ರತಿವಾದಿಯ ತಂದೆ ಹಾಗೂ ಸಹೋದರರು ಸಹಿಗಳನ್ನು ಪಡೆದುಕೊಂಡಿರುವುದಿಲ್ಲ. 2 ನೇ ಪ್ರತಿವಾದಿಯ ಸಹೋದರರಿಗೆ ಮೋಸ ಮಾಡುವ ಉದ್ದೇಶದಿಂದ 2 ನೇ ಪ್ರತಿವಾದಿಯೊಂದಿಗೆ ಮೀಲಾಪಿಯಾಗಿ ಕಡಿಮೆ ಬೆಲೆಗೆ ಸದರಿ ಜಮೀನುಗಳನ್ನು ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ಏಪ್ರೀಲ್-2022 ರಲ್ಲಿ ವಾದಿಯರ ಕಬ್ಜಾಕ್ಕೆ ನಾನು ತೊಂದರೆ ಉಂಟು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಆಸ್ತಿಗಳು ನನ್ನ ಕಬ್ಜಾದಲ್ಲಿವೆ ಎಂದು ನುಡಿದಿರುತ್ತಾರೆ. ಸದರಿ ಎರಡೂ ಆಸ್ತಿಗಳು ವಾದಿಯ ಹಾಗೂ ಆತನ ಸಹೋದರರ ಕಬ್ಜಾದಲ್ಲಿದೆ ಎಂದರೆ ಸರಿಯಲ್ಲ. 2022 ರಲ್ಲಿ ವಾದಿಯ ಕಬ್ಜಾಕ್ಕೆ ತೊಂದರೆ ಉಂಟು ಮಾಡಿದಾಗ ಆತನಿಗೆ ನಾನು ಖರೀದಿಸಿದ ವಿಷಯ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**

**OS No:206/2022**
**DW**:1